ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾಗಿದೆ. ಆದರೆ ಸರಿಯಾಗಿ ಮಾಡುತ್ತಾ ಇಲ್ಲ. ಇವರು ಒಕ್ಕೂಟದ ಪರವಾಗಿ ವಾಲುತ್ತಿದ್ದಾರೆ. ನಾನೂ ಸಹ ಸಭಾ ತ್ಯಾಗ ಮಾಡುತ್ತಿದ್ದೇನೆ.

(ಪಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:– ನಿಯಮ 334ರ ಮೇರೆಗೆ ಸಭೆಯಲ್ಲಿ ಬರುವ ವಿಷಯಗಳು. ಶ್ರೀ ಹರ್ಷ ಕುಮಾರ್.

(ಗೊಂದಲ)

Mr. Speaker:– It will not go into the record. I told you no further discussion on this.

ಅಧ್ಯಕ್ಷರು:– ಕಾಲ್ ಅಟೆನ್‌ಷನ್ ಕೇಳಿದವರೆಲ್ಲಾ ಹೊರಗಡೆ ಹೋಗಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಸರ್ಕಾರದ ಧೋರಣೆಯನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಈ ವಿಷಯಕ್ಕೆ ಸಂಬಂಧಪಟ್ಟದ್ದು ಅಲ್ಲ, ಬೇರೆ ವಿಷಯದ ಬಗ್ಗೆ ಒಂದು ನಿಮಿಷ ಕೇಳುತ್ತೇನೆ.

ಅಧ್ಯಕ್ಷರು:– ಇಲ್ಲ ಸಾಧ್ಯವಿಲ್ಲ, 334 ಮೇರೆಗೆ ಶ್ರೀ ಹರ್ಷಕುಮಾರ್ ಗೌಡ.

ಶ್ರೀ ಹರ್ಷಕುಮಾರ್ ಗೌಡ:– ಮೈಸೂರು ನಗರದ .....

ಅಧ್ಯಕ್ಷರು:– ವಿಷಯಾಂತರಕ್ಕೆ ನಾನು ಅನುಮತಿ ಕೊಡುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ:– ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ನನ್ನ ಛೇಂಬರಿನಲ್ಲಿ ಬಂದು ಕಾಣಿ ನಾನು ಅವಕಾಶ ಕೊಡುತ್ತೇನೆ. ಪದೇ ಪದೇ ನೀವು ಇಲ್ಲಿ ಕೇಳಿದರೆ ಅವಕಾಶ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ:– ನಿನ್ನೆ ವಿದ್ಯುತ್ ವಿಷಯದ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಿದ್ದರು. ನಿನ್ನೆ ಅವರು ಹೇಳಿಕೆ ಕೊಡಲಿಲ್ಲ. ಬಹುಶಃ ಇವತ್ತು ಅವರು ತಯಾರಾಗಿ ಬಂದಿದ್ದಾರೆಂದು ಅನಿಸುತ್ತದೆ. ದಯವಿಟ್ಟು ಅವರು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ನಮ್ಮ ಪರಿಸ್ಥಿತಿ ಬಹಳ ಭೀಕರವಾಗಿ, ಕಠಿಣವಾಗಿ, ಒಂದು ದಿವಸ ತಡವಾದರೂ ಸಹ ಅನಾಹುತವಾಗುತ್ತದೆ. ಪ್ರತಿ ನಿಮಿಷ ಕೂಡ ಅನಾಹುತವಾಗುತ್ತಾ ಇದೆ. ದಯವಿಟ್ಟು ಅದರ ಬಗ್ಗೆ ಹೇಳಿಕೆ ಮಾಡಬೇಕು, ಅಲ್ಲಿರತಕ್ಕ ವಿಷಯದ ಬಗ್ಗೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ವಿದ್ಯುತ್ ವಿಚಾರದ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಅಧ್ಯಕ್ಷರು:– ತಂದಿದ್ದೀರಲ್ಲಾ, ಅವರು ಹೇಳುತ್ತಾರೆ, ಹರ್ಷಕುಮಾರ್ ಗೌಡರೆ .....

ನಿಯಮ 334ರ ಮೇರೆಗೆ

(1) ಮೈಸೂರು ನಗರದ ಜಯಲಕ್ಷ್ಮಿಪುರಂನಲ್ಲಿರುವ 5 ಎಕರೆ ಪ್ರದೇಶದಲ್ಲಿ ಆಸ್ಪತ್ರೆ ಕಟ್ಟಲು ಒತ್ತಾಯ.

ಶ್ರೀ ಕೆ. ಹರ್ಷಕುಮಾರ್ ಗೌಡ:– ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ವಾಣಿವಿಲಾಸ್ ಮೊಹಲ್ಲಾದ ಜಯಲಕ್ಷ್ಮಿಪುರಂನಲ್ಲಿ 5 ಎಕರೆ ಪ್ರದೇಶದಲ್ಲಿನ ಒಂದು ಭಾಗದಲ್ಲಿ ಲಕ್ಷ್ಮೀದೇವಮ್ಮನವರ

ಹೆಸರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಇದೆ. ಉಳಿದ ಪ್ರದೇಶ ಖಾಲಿ ಬಿದ್ದಿದ್ದು ಸ್ಥಳೀಯ ಜನತೆ ಈ ಪ್ರದೇಶದಲ್ಲಿ ಒಂದು ಜನರಲ್ ಆಸ್ಪತ್ರೆ ಕಟ್ಟಲು ಹಲವಾರು ಬಾರಿ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಇಲಾಖೆ ಈವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮೈಸೂರು ನಗರದ ಪ್ರಸಕ್ತ ಜನಸಾಂದ್ರತೆಯ ದೃಷ್ಟಿಯಿಂದ ಮತ್ತು ಮೈಸೂರಿನ ಪಶ್ಚಿಮ ಭಾಗದ ಜನತೆಯ ದೃಷ್ಟಿಯಿಂದ ಅವಶ್ಯಕವಾಗಿ ಇಲ್ಲಿ ಒಂದು ಜನರಲ್ ಆಸ್ಪತ್ರೆಯು ಅತ್ಯಾವಶ್ಯಕ. ಆದ್ದರಿಂದ ಈ ಜನರಲ್ ಆಸ್ಪತ್ರೆಯನ್ನು ಕಟ್ಟುವಲ್ಲಿ ತುರ್ತಾಗಿ ಕಾರ್ಯೋನ್ಮುಖರಾಗುವ ಮೂಲಕ ಸ್ಥಳೀಯ ಜನತೆಯ ಬಹಳ ದಿನಗಳ ಬೇಡಿಕೆಯನ್ನು ಕಾರ್ಯಗತಗೊಳಿಸಬೇಕೆಂದು ಈ ಮೂಲಕ ಒತ್ತಾಯ ಪೂರ್ವಕವಾಗಿ ಕೋರುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಆರೋಗ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮೈಸೂರು ನಗರವು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೊಳಪಟ್ಟಿರುತ್ತದೆ. ನಗರ ಪಾಲಿಕೆಯ ಆಡಳಿತ ವ್ಯಾಪ್ತಿಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಮತ್ತು ಸೌಲಭ್ಯಗಳನ್ನು ಉತ್ತಮ ಪಡಿಸುವ ವಿಚಾರ ನಗರ ಪಾಲಿಕೆಯ ಮುಖ್ಯ ಕಾರ್ಯಕ್ರಮದಲ್ಲಿ ಬಂದಾಗಿರುತ್ತದೆ, ನೂತನ ಆಸ್ಪತ್ರೆಗಳನ್ನು ನಗರಪಾಲಿಕೆಯ ಸೀಮೆಯಲ್ಲಿ ಮಂಜೂರು ಮಾಡುವುದು ಸರ್ಕಾರಕ್ಕೆ ಹೆಚ್ಚಿನ ಹೊಣೆಯಾಗುತ್ತದೆ. ಈ ಕಾರಣದಿಂದ ಈ ಆಸ್ಪತ್ರೆಯನ್ನು ನಗರ ಪಾಲಿಕೆಯವರು ಹೆಚ್ಚಿನ ಆಸಕ್ತಿ ವಹಿಸಿ, ಅಭಿವೃದ್ಧಿ ಪಡಿಸಬೇಕಾಗುತ್ತದೆ. ಮತ್ತು ಜನರಲ್ ಆಸ್ಪತ್ರೆಗೆ ಬೇಕಾಗುವ ಕಟ್ಟಡವನ್ನು ವಿನ್ಯಾಸದಂತೆ ಸಿದ್ಧಪಡಿಸಿ, ನಗರ ಪಾಲಿಕೆಯ ವೆಚ್ಚದಲ್ಲಿಯೇ ಕಟ್ಟಿಸಿಕೊಡಬೇಕಾಗುತ್ತದೆ. 30 ಹಾಸಿಗೆಗಳ ಕಟ್ಟಡವು ಅಂದಾಜು ವೆಚ್ಚ ಪ್ರಸಕ್ತ ಸಾಲಿನ ದರದಂತೆ ಸುಮಾರು 48.00 ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಕಟ್ಟಡವನ್ನು ನಗರಪಾಲಿಕೆಯವರು ಕಟ್ಟಿಸಿಕೊಂಡು ಮುಂದೆ ಬಂದಲ್ಲಿ ಮನವಿಯನ್ನು ಪರಿಶೀಲಿಸಲಾಗುವುದು.

(2) ಹಾಸನ ಕ್ಷೇತ್ರದ ಶಾಂತಿಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಗೆ ಹೆರಿಗೆ ವಾರ್ಡ್.

ಶ್ರೀ ಕೆ. ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೆ, ಹಾಸನ ವಿಧಾನ ಸಭಾ ಕ್ಷೇತ್ರದ ಶಾಂತಿಗ್ರಾಮದಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಕಳೆದ 30 ವರ್ಷಗಳಿಂದ ಇದೆ. ಈ ಆಸ್ಪತ್ರೆಗೆ ಪ್ರತಿ ನಿತ್ಯ ನೂರಾರು ರೋಗಿಗಳು ಬರುತ್ತಿದ್ದಾರೆ. ಶಾಂತಿಗ್ರಾಮ ಮತ್ತು ಸುತ್ತಮುತ್ತಲ 25ಕ್ಕೂ ಮೇಲ್ಪಟ್ಟ ಗ್ರಾಮಗಳ ಜನರು ಇದೇ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಹೆರಿಗೆ ವಾರ್ಡ್ ಇರುವುದಿಲ್ಲ. ಶಾಂತಿ ಗ್ರಾಮ ಮತ್ತು ಸುತ್ತಮುತ್ತಲ 25 ಗ್ರಾಮಗಳ ಗರ್ಭಿಣಿ ಹೆಂಗಸರಿಗೆ ತೊಂದರೆ ಆದರೆ 14 ಕಿ.ಮೀ. ದೂರದಲ್ಲಿರುವ ಹಾಸನ ಪಟ್ಟಣದ ಜನರಲ್ ಆಸ್ಪತ್ರೆಗೆ ಅಥವಾ 24 ಕಿ.ಮೀ. ದೂರದಲ್ಲಿರುವ ಚನ್ನರಾಯನಪಟ್ಟಣದ ಜನರಲ್ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸಕಾಲದಲ್ಲಿ ಹೆಂಗಸರು ಹೆರಿಗೆಗೆ ಹೋಗಲಾದರೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ವಿಚಾರವನ್ನು ಮನಗಂಡು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಸ್ಥಳೀಯ ಜನರು ಕಳೆದ 10–15 ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದ್ದಾರೆ. ಈ ತೊಂದರೆಯನ್ನು ಮನಗಂಡು ಹಾಸನ ಜಿಲ್ಲಾ ಪರಿಷತ್ತಿನವರು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಬಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿಯನ್ನು ಕೂಡ ಸಲ್ಲಿಸಿರುತ್ತಾರೆ. ಶಾಂತಿ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದ ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡಬೇಕೆಂದು ಸ್ಥಳೀಯ ಜನರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಶ್ರೀ ಕೆ.ಹೆಚ್.